# ಆಕಾಶಗಂಗೆಯ ಅರಸುತ್ತ...

■ **ಶಶಿಕುಮಾರ್ ಸಿಂಗ್**



ಛಾಯಾಗ್ರಹಣ ಎಂದರೆ ನೆರಳು–ಬೆಳಕಿನಾಟ. ಕ್ಯಾಮೆರಾದ ನಾನಾ ಪರಿಗಳನ್ನು ಪ್ರಯತ್ನಿಸಿದ ನನಗೆ ರಾತ್ರಿ ಸಮಯದ ಛಾಯಾಗ್ರಹಣ ಬಹಳ ಅದ್ಭುತ ಅನುಭವ ನೀಡಿದೆ. ಸೂರ್ಯಾಸ್ತದ ನಂತರದ ನಿಶಾಚರ ಬದುಕು ವಿಶೇಷ. ಸ್ಪಷ್ಟವಾಗಿ ಕಾಣಿಸದ, ಕೇಳಿಸದ, ಅರಿಯದ ವಿಚಾರಕ್ಕೆ ಮಾನವಜಾತಿ ಮರುಳಾಗುವುದು ಸಹಜವೇ.

'ಆಸ್ಟ್ರೊ ಫೋಟೊಗ್ರಫಿ' ಮಾಡಬೇಕೆಂಬ ಬಯಕೆ ಬಹುದಿನಗಳಿಂದ ನನ್ನಲ್ಲಿ ತುಂಬಿಕೊಂಡಿತ್ತು. ಆಕಾಶದಲ್ಲಿ ಕಾಣಸಿಗುವ ಗ್ರಹಗಳು, ಉಪಗ್ರಹಗಳು, ನಕ್ಷತ್ರ, ಉಲ್ಕೆ, ಧೂಮಕೇತು ಈ ಎಲ್ಲಾ ಚಲನವಲನಗಳನ್ನು ಚಿತ್ರಿಸುವುದೇ ಆಸ್ಟ್ರೊ ಫೋಟೊಗ್ರಫಿ. ಈ ಪ್ರಕಾರದ ಫೋಟೊಗ್ರಫಿ ಮಾಡಲು ಉತ್ತಮ ಕ್ಯಾಮೆರಾ ಸಲಕರಣೆಗಳು, ಆಕಾಶಕಾಯಗಳ ಬಗ್ಗೆ ತಿಳಿವಳಿಕೆ, ಬೆಳಕಿನ ಮಾಲಿನ್ಯವಿಲ್ಲದ ಸ್ಥಳದ ಅವಶ್ಯಕತೆ ಇದೆ. ನಮ್ಮಲ್ಲಿರುವ ಕ್ಯಾಮೆರಾ ಪರಿಕರಗಳನ್ನು ಬಳಸಿ ಕ್ಷೀರಪಥದ ಚಿತ್ರ ಕ್ಲಿಕ್ಕಿಸಬಹುದು.

ಸ್ನೇಹಿತರೊಂದಿಗೆ ಕೂಡಿ ಒಂದು ರಾತ್ರಿ ಕ್ಷೀರಪಥ ಹುಡುಕಲು ಹೊರಟೆ. ಕಾಂಕ್ರೀಟ್ ನಾಡಲ್ಲಿರುವ ನಮಗೆ ಕಡುಕತ್ತಲು ಹುಡುಕುವುದೇ ಪ್ರಯಾಸದ ಕೆಲಸ. ಜಾಲತಾಣದಲ್ಲಿ ಬಾಟಲಿಯಿಂಗ್ ಕ್ರಮಾನುಸಾರ ಬೆಳಕಿನ ಮಾಲಿನ್ಯವಿಲ್ಲದ ಜಾಗಕ್ಕೆ ಸೂಕ್ತವೆನಿಸಿದ್ದು ಶೆಟ್ಟಿಹಳ್ಳಿ ಚರ್ಚ್. ಇದು ಹಾಸನ ಜಿಲ್ಲೆಯ ಶೆಟ್ಟಿಹಳ್ಳಿ ಗ್ರಾಮದಲ್ಲಿದೆ. ಈ ಚರ್ಚ್ ಅನ್ನು 1860ರಲ್ಲಿ ಫ್ರೆಂಚ್ ಮಿಷನರೀಸ್ ಸ್ಥಾಪಿಸಿದ್ದರು. 1979ರಲ್ಲಿ ಹೇಮಾವತಿ ನದಿಗೆ ಅಡ್ಡಲಾಗಿ ಗೊರೂರು ಡ್ಯಾಮ್ ಕಟ್ಟಿದಾಗ ಈ ಚರ್ಚ್ ಮುಳುಗಡೆಯಾಯಿತು. ಬೇಸಿಗೆಯಲ್ಲಿ ನೀರಿಳಿತವಾದಾಗ ಚರ್ಚ್ ಕಾಣುತ್ತದೆ ಹಾಗೂ ಮಳೆಗಾಲದಲ್ಲಿ ಸಂಪೂರ್ಣ ಮುಳುಗಡೆಯಾಗುತ್ತದೆ. ಆಗಿನ ಕಾಲದಲ್ಲಿ ಇಟ್ಟಿಗೆ, ಗಾರೆ, ಬೆಲ್ಜಿಯಂನ ಗಾಜು, ಬೆಲ್ಲ ಮತ್ತು ಮೊಟ್ಟೆ ಸಿಪ್ಪೆ ಉಪಯೋಗಿಸಿ ಕಟ್ಟಿದ್ದಾರೆ.

ಸತತ 45 ವರ್ಷದಿಂದ ಸರಿಸುಮಾರು 5–6 ತಿಂಗಳ ಕಾಲ ಮುಳುಗಡೆಯಲ್ಲಿದ್ದರೂ ಇಂದಿಗೂ ಇದರ ಉಪಸ್ಥಿತಿ ಸೋಜಿಗ. ವಿಶಾಲ ಡ್ಯಾಮ್ ಹಿನ್ನೀರು, ದೂರ ದೂರಕ್ಕೆ ಕಾಣುವ ಗ್ರಾಮದ ಬೆಳಕು, ಅದ್ಭುತ ಶಿತಲಾವಸ್ಥೆಯಲ್ಲಿರುವ ಚರ್ಚ್ ನೋಟ ನಮ್ಮನ್ನು ಸೂಜಿಗಲ್ಲಿನಂತೆ ಸೆಳೆದಿತ್ತು.

ನಾನು, ನನ್ನಿಬ್ಬರು ಸ್ನೇಹಿತರು ಕ್ಷೀರಪಥ ಅರಸಿ ಹೊರಟೆವು. ಕ್ಷೀರಪಥ ಆಕಾಶಕಾಯಗಳ ಸಮೂಹ. ಗ್ರೀಕನ್ನರ ಪ್ರಕಾರ, ಆಗಸದಲ್ಲಿ ಹೆರ ದೇವತೆ ಹಾಲು ಚೆಲ್ಲಿದಂತೆ ಎಂಬರ್ಥ ಕೊಡುತ್ತದೆ. ಕಗ್ಗತ್ತಲಿನಲ್ಲಿ ಬರಿಗಣ್ಣಿನಿಂದ ನೋಡಬಹುದಾದ ವಿಸ್ಮಯವಿದು. ಅಮಾವಾಸ್ಯೆಯ ಹಿಂದೆ ಮುಂದಿನ ದಿನಗಳು, ಬೆಳಕಿನ ಮಾಲಿನ್ಯ ಕಡಿಮೆ ಇರುವ ಸ್ಥಳಗಳಲ್ಲಿ ಇವನ್ನು ವೀಕ್ಷಿಸಬಹುದು. ನಮ್ಮ ಸಾಹಸಕ್ಕಾಗಿ 'ಸ್ಟೆರಿಲಿಯಂ' ಎಂಬ ಅಪ್ಲಿಕೇಶನ್ ಖರೀದಿಸಿಯಾಯಿತು, ದುಬಾರಿ ಲೆನ್ಸ್‌ಗಳನ್ನು ಬಾಡಿಗೆಗೆ ಕೊಂಡಾಯಿತು. ಉಡಲು, ಉಣ್ಣಲು ಹೀಗೆ ಎಲ್ಲಾ ಬಗೆಯ ಸಿದ್ಧತೆಯಾಯಿತು.

ನಾವು ಶೆಟ್ಟಿಹಳ್ಳಿ ಚರ್ಚ್ ತಲುಪುವ ವೇಳೆಗೆ ಸೂರ್ಯ ಮುಳುಗಲು ಸಿದ್ಧನಿದ್ದ. ಕೆಳಗಿಳಿದವರೇ ಚರ್ಚ್ ಸುತ್ತಮುತ್ತ ಬೇಹುಗಾರಿಕೆ ಮುಗಿಸಿದೆವು. ನಮ್ಮ ಫೋಟೊಗ್ರಫಿ ಕಾರ್ಯಕ್ರಮ ಅಂಧಕಾರದಲ್ಲಿ ನಡೆಯುವುದರಿಂದ ಸ್ಥಳ ಪರಿಚಯ, ಮುಂಬರುವ ತೊಡಕುಗಳ ಮೇಲೆ ನಿಗಾ ಇಡುವುದು ಅನಿವಾರ್ಯವಾಗಿತ್ತು. ಆಕಾಶಗಂಗೆಯ ದರ್ಶನವಿದ್ದದ್ದು ರಾತ್ರಿ 11ರಿಂದ ಮುಂಜಾನೆ 3ರ ತನಕ. ವಾರಾಂತ್ಯದ ಕಾರಣ ಪ್ರವಾಸಿಗಳ ದಂಡೇ ಅಲ್ಲಿ ಸೇರಿತ್ತು. ಕೆಲ ವೆಡ್ಡಿಂಗ್ ಫೋಟೊಗ್ರಾಫರ್‌ಗಳು ಜೋಡಿಗಳ ತರಹೇವಾರಿ ಚಿತ್ರ ತೆಗೆಯುವಲ್ಲಿ ನಿರತರಾಗಿದ್ದರು. ಕೆಲ ದುಷ್ಕರ್ಮಿ ಛಾಯಾಗ್ರಾಹಕರು ನೀರಿನ ಮೇಲೆ ಪೆಟ್ರೋಲ್ ಸುರಿದು ಕಡ್ಡಿ ಗೀರಿ ಚಿತ್ರ ತೆಗೆಯುವ ಪ್ರಯತ್ನ ಮಾಡುತ್ತಿದ್ದರು.

ವನ್ಯಮೃಗಗಳ ಭೀತಿ, ಮೂಢನಂಬಿಕೆ ಚರ್ಚ್ ಅನ್ನು ನಿರ್ಜನರನ್ನಾಗಿಸಿತ್ತು. 9ರ ಒಳಗೆ ಚರ್ಚ್ ಸೇರಿದೆವು. ನಾವು ಎಣಿಸಿದಂತೇನೂ ಇರಲಿಲ್ಲ. ಕಾರ್ಮೋಡ ಮುಸುಕಿದ ವಾತಾವರಣ. ಗ್ರಾಮಗಳ ಬೀದಿದೀಪಗಳು ಜ್ವಲಿಸುತ್ತಿದ್ದವು. ಅತೀವ ಬೆಳಕು, ಕವಿದ ಮೋಡಗಳು ಕ್ಷೀರಪಥವಿರಲಿ, ಒಂದು ನಕ್ಷತ್ರವನ್ನೂ ಕಾಣದಂತಾಗಿಸಿತ್ತು. ಅಲ್ಲಿದ್ದ ಬೆಳಕಿನ ಮಾಲಿನ್ಯ ನೋಡಿದ ನಮಗೆ ಬಾಟಲಿಯಿಂಗ್ ಮ್ಯಾಪ್ ಕೈಕೊಟ್ಟಂತೆ ಗೋಚರಿಸಿತು.

ಸುಮಾರು 1 ಗಂಟೆಯ ಕಾಯುವಿಕೆ ನಂತರ ಮೋಡ ಚದುರಿ, ನಕ್ಷತ್ರಗಳು ಬಹು ಸ್ಪಷ್ಟವಾಗಿ ಗೋಚರಿಸಲಾರಂಭಿಸಿದವು. ಮೊದಲೇ ಯೋಜಿಸಿದಂತೆ ಧ್ರುವ ನಕ್ಷತ್ರದ ಸುತ್ತ ಒಂದು ಸ್ಟಾರ್ ಟ್ರೈಲ್ ಮಾಡಿದೆವು. ಸಾಮಾನ್ಯವಾಗಿ ಉತ್ತರ ನಕ್ಷತ್ರ, ಅಂದರೆ ಧ್ರುವನ ಸುತ್ತ ಬಾಕಿ ಎಲ್ಲಾ ನಕ್ಷತ್ರಗಳು ಚಲಿಸುತ್ತವೆ. ಭೂಮಿ

